ಸ್ಟೋನ್ ಅಂಡ್ ಸ್ಟೋನ್ ಪ್ರೊಸೆಸಿಂಗ್ ಟೆಕ್ನಾಲಜಿ'ಯಲ್ಲಿ ಭಾಗವಹಿಸಲು ಹಾಗೂ ಇಂಗ್ಲೆಂಡಿನ ವ್ಯಾಪಾರೋದ್ಯಮಿಗಳನ್ನು ಭೇಟಿ ಮಾಡಲು ದಿನಾಂಕ 15-5-1995ರಿಂದ 28-5-1995ರವರೆಗೆ ಇಟಲಿ, ಜರ್ಮನಿ ಮತ್ತು ಇಂಗ್ಲೆಂಡಿಗೆ ಪ್ರವಾಸ ಮಾಡಿದ್ದರು. ಇದಕ್ಕಾದ ವೆಚ್ಚ ರೂ.89,000-00

5. ಶ್ರೀ ಸಿ. ಬೈರೇಗೌಡ, ಕೃಷಿ ಸಚಿವರು ಹಾಗೂ ಶ್ರೀ ಡಿ.ಟಿ. ಜಯಕುಮಾರ್ ತೋಟಗಾರಿಕೆ ರಾಜ್ಯ ಸಚಿವರು, ಇಸ್ರೇಲ್ ದೇಶವು ಕೃಷಿ, ಪುಷ್ಪ ಕೃಷಿ ಹಾಗೂ ನೀರಾವರಿ ಬಗ್ಗೆ ಮಾಡಿರುವ ಪ್ರಗತಿಯನ್ನು ಅಧ್ಯಯಿಸಲು ದಿನಾಂಕ 16-7-95ರಿಂದ 23-7-95ರವರೆಗೆ ಸದರಿ ದೇಶಕ್ಕೆ ಭೇಟಿ ನೀಡಿದ್ದರು.

6.ಶ್ರೀ ಹಚ್.ಡಿ.ದೇವೇಗೌಡ, ಮುಖ್ಯಮಂತ್ರಿಗಳು, ಶ್ರೀ ಆರ್.ಟಿ.ದೇಶಪಾಂಡೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ಶ್ರೀ ರೋಶನ್ ಬೇಗ್, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಸಿಂಗಾಪುರ ಸರ್ಕಾರದೊಂದಿಗೆ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯ ಬಗ್ಗೆ ದ್ವಿಪಕ್ಷೀಯ ಮಾತುಕತೆಗಾಗಿ ದಿನಾಂಕ 24-7-1995ರಿಂದ 26-7-1995ರವರೆಗೆ ಸಿಂಗಾಪುರಕ್ಕೆ ಭೇಟಿ ನೀಡಿದ್ದರು. ಇದಕ್ಕಾದ ವೆಚ್ಚ: ಮುಖ್ಯಮಂತ್ರಿಗಳು: ರೂ.37245-00,ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು: ರೂ. 31,210-00, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು: ರೂ. 30,385-00

ವಿಷಯ: ನಗರದಲ್ಲಿ ಲೈವ್ ಬ್ಯಾಂಡ್ ನಡೆಸಲು ಅನುಮತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1619 (1501)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮತ್ತೆ ಲೈವ್ ಬ್ಯಾಂಡ್‌ಗೆ ಅನುಮತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಆ) ಲೈವ್‌ಬ್ಯಾಂಡ್‌ಗೆ ಅನುಮತಿ ನೀಡಿದಲ್ಲಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವುದಿಲ್ಲವೇ?

ಇ) ಲೈವ್ ಬ್ಯಾಂಡ್‌ನ ಕಲಾವಿದರುಗಳಿಗೆ ಲೈವ್ ಬ್ಯಾಂಡ್‌ನ ಬದಲಾಗಿ ಬೇರೆ ಉದ್ಯೋಗ ಅವಕಾಶವನ್ನು ಅಥವಾ ಕೈಗಾರಿಕೆಯನ್ನು ಸ್ಥಾಪಿಸಲು ಆರ್ಥಿಕ ನೆರವನ್ನು ಸರ್ಕಾರ ನೀಡಲು ಉದ್ದೇಶಿಸಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):-

ಅ) ಈ ವಿಷಯ ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಪರಿಶೀಲನೆಯಲ್ಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಲೈವ್ ಬ್ಯಾಂಡ್‌ನ್ನು ಒಳಾಡಳಿತ ಇಲಾಖೆಯು ನಿಷೇಧಿಸಿಲ್ಲ. ಅಬಕಾರಿ ಕಾನೂನಿಗೆ ಇದು ಬಾಹಿರವಾದದ್ದರಿಂದ ನಿಷೇಧಕ್ಕೆ ಒಳಗಾಗಿದೆ. ಇದರಿಂದಾಗಿ ಉದ್ಯೋಗ ಅವಕಾಶ ಅಥವಾ ಕೈಗಾರಿಕೆಯನ್ನು ಸ್ಥಾಪಿಸಲು ಆರ್ಥಿಕ ನೆರವನ್ನು ನೀಡುವ ಪ್ರಶ್ನೆಯೂ ಸಹ ಒಳಾಡಳಿತ ಇಲಾಖೆಗೆ ಸಂಬಂಧಿಸುವುದಿಲ್ಲ.

ವಿಷಯ: ತುಮಕೂರು ಹಾಗೂ ಚಿತ್ರದುರ್ಗಾ ಜಿಲ್ಲೆಗಳಲ್ಲಿ ಕೆರೆಗಳ ಹೂಳು ಎತ್ತುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1620 (2128)

ಶ್ರೀ ಬಿ.ಸತ್ಯನಾರಾಯಣ (ಶಿರಾ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು (ಸಣ್ಣ ನೀರಾವರಿ ಕೆರೆಗಳು ಒಳಗೊಂಡಂತೆ ಪೂರ್ಣ ವಿವರದೊಂದಿಗೆ)

ಆ) ಈ ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹೂಳು ತೆಗೆಯಲು ತೆಗೆದುಕೊಂಡಿರುವ ಕ್ರಮಗಳೇನು?

ಈ) ಹೂಳು ತೆಗೆಯುವ ಬಗ್ಗೆ ವಿಶ್ವಬ್ಯಾಂಕ್ ನೆರವು ಪಡೆಯುವ ಯೋಜನೆ ಯಾವ ಹಂತದಲ್ಲಿದೆ, ಯಾವ ಯಾವ ಜಿಲ್ಲೆಗಳಿಗೆ ಅನ್ವಯಿಸುತ್ತದೆ?

ಶ್ರೀಮತಿ ಲೀಲಾದೇವಿ .ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):-

ಅ) ಒಟ್ಟು ಕೆರೆಗಳ ಸಂಖ್ಯೆ 2385. ವಿವರಗಳು ಕೆಳಕಂಡಂತಿರುತ್ತದೆ.

ಕ್ರ.ಸಂ.	ಜಿಲ್ಲೆ	ಕೆರೆಗಳ ಸಂಖ್ಯೆ		ಒಟ್ಟು ಅಚ್ಚುಕಟ್ಟು ಪ್ರದೇಶ	
		ಸ.ನೀ ದಕ್ಷಿಣ ವಲಯ	ಜಿಲ್ಲಾ ಪಂಚಾಯತ್	ಒಟ್ಟು	(ಹೆಕ್ಟೇರ್)
1)	ತುಮಕೂರು	434	1576	2010	70700
2)	ಚಿತ್ರದುರ್ಗ	189	186	375	34717
	ಒಟ್ಟು	623	1762	2385	105417

ಆ) ಬಂದಿದೆ.

ಇ) ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ, ಕೆರೆಗಳಲ್ಲಿನ ಭಾಗಶಃ ಹೂಳು ತೆಗೆಯಲು ಯೋಜನೆಯನ್ನು ರೂಪಿಸಲಾಗುತ್ತಿದೆ.

ಈ) ಪರಿಶೀಲನೆಯಲ್ಲಿದೆ.

ವಿಷಯ: ತುಮಕೂರು ಜಲ್ಲೆಯಲ್ಲಿರುವ ಪೋಲೀಸ್ ಠಾಣೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1621 (2126)

ಶ್ರೀ ಬಿ.ಸತ್ಯನಾರಾಯಣ (ಶಿರಾ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಇರುವ ಪೋಲೀಸ್ ಠಾಣೆಗಳೆಷ್ಟು?

ಆ) ಸದರಿ ಠಾಣೆಗಳಲ್ಲಿ ನಿಯಮಾನುಸಾರ ಇರಬೇಕಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು? ಈಗ ಇರುವ ಸಿಬ್ಬಂದಿಗಳೆಷ್ಟು?

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?